

# ಮನೆಯಂಗಳದಲ್ಲಿ ಆನೆಹಿಪ್ಪಲಿ

- ಡಾ. ಸತ್ಯ

ಮಳೆಕಾಡಿನ ಆನೆಗೆ ಮತ್ತು ಮನೆಯಂಗಳದ ಔಷಧೀಯ ಸಸ್ಯ ಹಿಪ್ಪಲಿ ಬಳ್ಳಿಗೆ ಎಲ್ಲಿಯ ಸಂಬಂಧ ಎಂದಿರಾ? ನಿಮ್ಮ ಅಂಗಳದಲ್ಲಿ ಭಾರಿ ಗಾತ್ರದ ಮರಸುತ್ತು ಬಳ್ಳಿ ಬೆಳೆಸಲು ಸಾಧ್ಯ. ಇದನ್ನು ದೊಡ್ಡ ಮನಿ ಪ್ಲಾಂಟ್ ಎಂದೋ ಕಂದಡಿ ಹಾವಿನ ಬಳ್ಳಿ ಎಂದೋ ಜನರು ಗುರುತಿಸುತ್ತಾರೆ. ಆದರೆ ಇದು ಮನಿ ಪ್ಲಾಂಟ್ ಕುಲಕ್ಕೆ ಮಾತ್ರ ಸೇರಿದ ಖಮೆನಿ ಯೂಸ್‌ಫುಲ್ ಖಬಳ್ಳಿ. ವಾಸ್ತವವಾಗಿ ಇದು ಸಹ ಅರಣ್ಯ ಮೂಲದ್ದೇ ಕಾಡಿನ ಭಾರಿ ಮರಗಳಿಗೆ ತನ್ನ ಗಿಣ್ಣು ಬೇರುಗಳಿಗೆ ಅಪ್ಪಿಕೊಂಡು ಎತ್ತರೆತ್ತರಕ್ಕೆ ಏರುವ ಬಳ್ಳಿಯಿದು. ಇದರ ಕುಲ ರ್‍ಯಾಷಿಡೊ ಫೊರ ಫರ್ಟುಸಾ. ಅಂದಚೆಂದದ ಅಲಂಕಾರಿ ಸಸ್ಯ ಈ ಆನೆಹಿಪ್ಪಲಿ. ಗೇಣುದ್ದದ ಬಲಿತ ಕಾಂಡವನ್ನಾಗಲೀ ಒಣಗಿದ ಕಿರಿಯ ಕರಿಬೀಜಗಳನ್ನಾಗಲೀ ಮಣ್ಣಿಗೆ ಹಾಕಿದರೆ ಹೊಸ ಸಸಿ ಸಿದ್ಧ. ನೀರು ಮತ್ತು ಫಲವತ್ತಾದ ಭೂಮಿ ಮಾತ್ರ ಅಗತ್ಯ ಇದರ ಬೆಳವಣಿಗೆ ಬಹಳ ನಿಧಾನ. ಒಳ್ಳೆಯ ಆರೈಕೆ ದೊರೆತರೆ ಮಕ್ಕಳ ರೆಟ್ಟೆಗಾತ್ರದ ಬಳ್ಳಿಯು ಕಾಣಸಿಗಬಹುದು. ಪರ್ಯಾಯ ಎಲೆ ಜೋಡಣೆ ಒಂದೊಂದು ಎಲೆಯು ಊಟಬಡಿಸುವ ಬಾಳೆ ಎಲೆಗಿಂತ ಮಿಗಿಲು ಗಾತ್ರದ್ದು. ಬಹುತೇಕ ತುದಿಬಾಳೆ ಎಲೆಯ ಆಕಾರ ಮಧ್ಯೆ ಮಧ್ಯೆ ಚೂರಿಯಲ್ಲಿ ಕತ್ತರಿಸಿದ ಅಥವಾ ಸೀಳಿದ ರಚನೆಗಳು. ಎಲೆಯ ಪ್ರಧಾನ ನರದ ಕವಲುಗಳಾಗಿ ೮-೧೨ ಉಪನರಗಳು. ಕವಲು ರೆಂಬೆಯ ತುದಿಯಲ್ಲಿ ಅರಳುವ ಉದ್ದನೆಯ ಬಿಳಿಯ ಹೂ ಗುಚ್ಚ. ಅದನ್ನು ಆವರಿಸಿಕೊಳ್ಳುವ ತಿಳಿಹಸಿರು ರಚನೆ ಹೂವಿನ ಪರಾಗಸ್ಪರ್ಶವಾದ ಬಳಿಕ ಮಾಂಸದ ದುಂಡನೆಯ ದಂಟಿನಲ್ಲಿ ಅಂಟಿಕೊಳ್ಳುವ ಕಿರಿಯ ಬೀಜಗಳು.



ವಾಸ್ತವವಾಗಿ ಹಿಪ್ಪಲಿ ಮತ್ತು ಆನೆಹಿಪ್ಪಲಿ ವಿಭಿನ್ನ ಸಸ್ಯವರ್ಗಕ್ಕೆ ಸೇರಿದವು. ಹಿಪ್ಪಲಿಗೆ ವೀಳ್ಯದೆಲೆಯ ಹೋಲಿಕೆ ಮತ್ತು ಆನೆಹಿಪ್ಪಲಿಗೆ ಕೆಸವಿಯ ಹೋಲಿಕೆ ಹೆಚ್ಚು ಸಮಂಜಸ. ಆದರೆ ಹಿಪ್ಪಲಿ ಬೀಜಗಳು ಮತ್ತು ಆನೆಹಿಪ್ಪಲಿಯ ಬೀಜಗಳು ಉಪಯೋಗದಲ್ಲಿ ಸಮಾನ ಅವಕಾಶವುಳ್ಳವು. ಎರಡೂ ಸಹ ಭಾರಿ ಖಾರ. ಅಜೀರ್ಣ, ಅಪಚನ ಮತ್ತು ಕಫದೋಷ ನಿವಾರಕ. ಹೀಗಾಗಿ ಒಂದರ ಬದಲಿಗೆ ಮತ್ತೊಂದನ್ನು ಬಳಸುವ ಪರಿಪಾಠ ಸಾವಿರಾರು ವರ್ಷದಿಂದ ನಡೆದುಬಂದಿದೆ. ಮಧ್ಯಭಾರತದ ಬುಡಕಟ್ಟು ಮಂದಿ ಹತ್‌ಕೋಲ ಎಂಬ ಹೆಸರಿನಡಿ ಗುರುತಿಸುವ ಆನೆಹಿಪ್ಪಲಿಯು ಮಕ್ಕಳ ಹಿರಿಯರ ಕೆಮ್ಮುದಮ್ಮು ನೆಗಡಿ ಪರಿಹಾರಿ. ಈ ನಿಟ್ಟಿನಲ್ಲಿ ಕರ್ನಾಟಕದ ಬುಡಕಟ್ಟು ಮಂದಿ ಕೂಡ ಹಿಂದುಳಿದಿಲ್ಲ. ಆನೆಹಿಪ್ಪಲಿಯನ್ನು ರಕ್ಕಸ ಬೂತಾಳೆ ಎಂದು ಕರೆದು ಹಾವಿನ ವಿಷ ಮತ್ತು ಹಳೆಯ ಜ್ವರಕ್ಕೆ ಉಪಯೋಗಿಸುತ್ತಾರೆ. ಈ ಬಳಕೆಯು ಮೈಸೂರು ಜಿಲ್ಲೆಯ ಹುಣಸೂರು ತಾಲ್ಲೂಕಿನ ಜೇನು ಕುರುಬರ ಹಾಡಿಗಳಲ್ಲಿ ಕಂಡುಬಂದಿದೆ. ಅವರು ಬಲಿತ ಕಾಂಡದ ಪ್ರಯೋಗ ಮಾಡುತ್ತಾರೆ. ಮಲೆಯಾಳ ಮತ್ತು ತಮಿಳಿನಲ್ಲಿ ಕೂಡ ಆನತಿಪ್ಪಲಿ ಎಂಬ ಹೆಸರು ಈ ಬಳ್ಳಿಯದು. ದಕ್ಷಿಣ ಭಾರತದ ಆದ್ರ್ಯ ಹಸಿರು ಕಾಡುಗಳಲ್ಲಿ ಸುಮಾರು ೪೦೦೦ ಅಡಿಯ ಬೆಟ್ಟಗುಡ್ಡಗಳವರೆಗೆ ಆನೆಹಿಪ್ಪಲಿ ಬಳ್ಳಿಯ ಸಹಜ ನೆಲೆಗಳು ಕಂಡುಬರುತ್ತವೆ. ಹೀಗೆ ಹಸಿರು ಕಾಡಿನಿಂದ ನಾಡಿನ ಹಸಿರು ಅಂಗಳಗಳಿಗೆ ವಲಸೆ ಬಂದ ಆನೆಹಿಪ್ಪಲಿಯು ಕೇವಲ ಅಲಂಕಾರಕ್ಕಷ್ಟೇ ಅಲ್ಲ ಅಪರೂಪದ ಮದ್ದಿನ ಗುಣಗಳ ತವರುಮನೆ. ಒಣಬೀಜ ಅಥವಾ ಒಳಕಾಂಡವನ್ನು ಹೆಚ್ಚು ಕಾಲ ಕಾಪಾಡಿಕೊಂಡು ಆಪತ್ತಿನ ಸಮಯಗಳಲ್ಲಿ ಔಷಧಿಯಾಗಿ ಬಳಸುವ ಅವಕಾಶವಿದೆ. ಕೀಲುಗಂಟಿನ ನೋವು ಕ್ರಿಮಿದೋಷ ಮತ್ತು ಕಮ್ಮುನಗಡಿಗಳಲ್ಲಿ ಆನೆಹಿಪ್ಪಲಿಯ ಬಳಕೆಯ ವಿಶೇಷ ಉಲ್ಲೇಖಗಳು ಆಯುರ್ವೇದ ಗ್ರಂಥಗಳಲ್ಲಿವೆ. ನೆಲದಡಿಯ ಬೇರಿಗೂ ಸಹ ಮದ್ದಿನ ಗುಣಬಳಕೆ ಇದೆ.

ಅತ್ತ ಅಲಂಕಾರ ಇತ್ತ ಉಪಕಾರಕ್ಕಾಗಿ ಆನೆಹಿಪ್ಪಲಿಯನ್ನು ನಿಮ್ಮ ಅಂಗಳಕ್ಕೆ ಬರಮಾಡಿಸಿಕೊಳ್ಳಿ. ಹಾಗೂ ಈ ಬಳ್ಳಿಯ ಉಪಕಾರಿ ಗುಣಗಳನ್ನು ನಾಲ್ಕಾರು ಮಂದಿಗೆ ತಿಳಿಸಿರಿ.